

ನಮ್ಮ ಮನೆಯಲ್ಲೇ ಇದ್ದು ಬಿಡೋಣ' ಎಂದು ಗಂಡನನ್ನು ಒಲೈಸುತ್ತಾರೆ. ಆತ ಅವರ ಮನೆಯಲ್ಲಿ ಮನೆ ಅಳಿಯ ಆಗಿ ಉಳಿಯುತ್ತಾನೆ. ಕ್ರಮೇಣ ಆತ ತನ್ನ ತಂದೆ–ತಾಯಿಯ ಸಂಬಂಧ ಕಡಿದುಕೊಳ್ಳುತ್ತಾನೆ. ವಿಶೇಷವೆಂದರೆ, ಆಸ್ತಿ ದಾಖಲೆಪತ್ರಗಳು ಎಲ್ಲವು ಮಗಳ ಹೆಸರಿನಲ್ಲೇ ಇರುತ್ತದೆ ಹೊರತು ಮನೆ ಅಳಿಯನ ಹೆಸರಲ್ಲಿ ನೋಂದಣಿ ಆಗುವುದಿಲ್ಲ.

ರೆಡ್ಡಿ ಮನೆತನಗಳಲ್ಲಿ ಮದುವೆಯಾಗುವವರ ಆಸ್ತಿ ಸಮಾನವಾಗಿ ಇರಬೇಕು. ಇಲ್ಲವೇ ಹೆಚ್ಚಿರಬೇಕು. ಹುಡುಗಿಯ ಆಸ್ತಿಗಿಂತ ಹುಡುಗನ ಆಸ್ತಿಯಿದ್ದರೆ ಮಾತ್ರ ಹುಡುಗಿಯ ಕಡೆಯವರು ಮದುವೆಗೆ ಒಪ್ಪುತ್ತಾರೆ. ತಮಗಿಂತ ಕಡಿಮೆ ಆಸ್ತಿ ಉಳ್ಳವರಿಗೆ ಅವರು ಯಾವುದೇ ಕಾರಣಕ್ಕು ಹುಡುಗಿಯನ್ನು ಕೊಡಲ್ಲ.

'ಮದುವೆ ಎಂಬುದು ಪ್ರೀತಿ, ಒಲುಮೆ, ಹೊಂದಾಣಿಕೆಯಿಂದ ಕೂಡಿ ಅರ್ಥಪೂರ್ಣ ಸಂಬಂಧ. ಆದರೆ, ವರ್ಷಗಳು ಕಳೆದಂತೆ ಮದುವೆಯ ವ್ಯಾಖ್ಯಾನ ಬದಲಾಗುತ್ತಿದೆ. ದೀರ್ಘಕಾಲದವರೆಗೆ ದಂಪತಿಗಳು ಖುಷಿಯಾಗಿರುವುದು ನೋಡುವುದೇ ಇತ್ತೀಚಿನ ದಿನಗಳಲ್ಲಿ ಅಕ್ಷರಶಃ ಅಪರೂಪವಾಗಿದೆ' ಎಂದು ಹಿರಿಯರೊಬ್ಬರು ತಿಳಿಸಿದರು.

ಗೌಣವಾಗುತ್ತದೆ. ಇನ್ನೂ ಕೆಲವರು ಮಹಾರಾಷ್ಟ್ರ, ಗುಜರಾತ್, ಪಶ್ಚಿಮ ಬಂಗಾಳಕ್ಕೆ ಹೋಗಿ, ಅಲ್ಲಿಯ ಹೆಣ್ಣನ್ನು ಹುಡುಕಿಕೊಂಡು 'ಯಾದಿ ಮೇಲೆ ಶಾದಿ' ಎಂಬಂತೆ ಮದುವೆ ಮಾಡಿಕೊಂಡು ಬರುತ್ತಾರೆ.

## ಮದುವೆ ಆಗದಿರುವುದಕ್ಕೆ ಕಾರಣ...

ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಹವ್ಯಕ ಬ್ರಾಹ್ಮಣ ಸಮುದಾಯದ ಯುವಕರ ವಯಸ್ಸು 35 ರಿಂದ 40 ದಾಟಿದರೂ ಅವಿವಾಹಿತರಾಗಿಯೇ ಉಳಿದಿದ್ದಾರೆ. ಅವರಲ್ಲಿ ಬಹುತೇಕರು ಕೃಷಿಕರು. ಮದುವೆ ವಯಸ್ಸಿಗೆ ಬಂದ ಯುವತಿಯರು ಅಗತ್ಯ ಸಂಖ್ಯೆಯಲ್ಲಿದ್ದರೂ ಕೃಷಿಕರ ಕುಟುಂಬಕ್ಕೆ ಧಾರೆಯೆರೆಯಲು ಆಕೆಯ ಪೋಷಕರು ಸಿದ್ಧರಿಲ್ಲ. ಇನ್ನೂ ಯುವತಿಯರು ಕೂಡ 'ಕೃಷಿಕ'ನನ್ನು ಬಾಳಸಂಗಾತಿ ಆಗಿಸಿಕೊಳ್ಳಲು ಬಯಸುತ್ತಿಲ್ಲ. ಆಸಕ್ತಿಕರ ಸಂಗತಿಯೆಂದರೆ, ಯುವತಿಯದ್ದು ಕೃಷಿ ಕುಟುಂಬದ ಹಿನ್ನೆಲೆಯೇ ಇರುತ್ತದೆ. ಕೃಷಿಯಷ್ಟೇ ಅಲ್ಲ, ಪುರೋಹಿತ ವೃತ್ತಿಯನ್ನು ಆಯ್ದುಕೊಂಡವರ ಕಡೆಗೂ ಆಸಕ್ತಿ ತೋರುತ್ತಿಲ್ಲ.

ಶಿರಸಿ, ಸಿದ್ದಾಪುರ, ಯಲ್ಲಾಪುರ ಮುಂತಾದ ಗ್ರಾಮೀಣ ಪ್ರದೇಶದಲ್ಲಿ ಅವಿವಾಹಿತರು ಹೆಚ್ಚಿದ್ದಾರೆ. ತಮ್ಮೆದುರೇ ಮಕ್ಕಳು ಅವಿವಾಹಿತರಾಗಿ ಜೀವನಪರ್ಯಂತ ಕಳೆಯುವುದು ಬೇಡವೆಂದು, ಹವ್ಯಕರು ಮನಸ್ಸನ್ನು ಕೊಂಚ ಉದಾರ ಮಾಡಿಕೊಂಡಿದ್ದಾರೆ. ತಮ್ಮ ಆಹಾರ ಪದ್ಧತಿಗೆ ಸರಿ ಹೊಂದಿಕೊಳ್ಳುವ ಲಿಂಗಾಯತ ಅಥವಾ ಅನ್ಯ ಸಮುದಾಯದವರ ಜೊತೆ ಸಂಬಂಧ ಬೆಳೆಸಿಕೊಳ್ಳತೊಡಗಿದ್ದಾರೆ. ಹೀಗಾಗಿ ಹಾವೇರಿ, ಗದಗ, ಧಾರವಾಡ ಜಿಲ್ಲೆಯ ಜನರೊಂದಿಗೆ ನೆಂಟಸ್ತನ ವೃದ್ಧಿಸಿದೆ.ಆದರೆ, ಇದು ತಿಳಿದುಕೊಂಡಷ್ಟು ಸುಲಭದ ಸಂಗತಿಯೇನಲ್ಲ. ಅದಕ್ಕಾಗಿ ಹಲವು ಹಂತದ ಮಾತುಕತೆ, ಕೊಡು–ತೆಗೆದುಕೊಳ್ಳುವಿಕೆ, ಮಠ–ದೇವಸ್ಥಾನಗಳ ಭೇಟಿ, ಸಂಪ್ರದಾಯ ಆಚರಣೆ ಎಲ್ಲವೂ ಪರಿಶೀಲನೆಗೆ ಒಳಪಡುತ್ತದೆ.

'ಲಿಂಗಾಯತ ಸಮುದಾಯದವರು ಅನ್ಯ ಜಾತಿಯವರೊಂದಿಗೆ ಸಂಬಂಧ ಕುದುರಿಸಿಕೊಳ್ಳಲು ಹಿಂಜರಿದಾಗ, ಸ್ವರ್ಣವಲ್ಲಿ ಮಠದ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಉತ್ತರ ಭಾರತದ ಬ್ರಾಹ್ಮಣ ಕುಟುಂಬಗಳನ್ನು ಸಂಪರ್ಕಿಸಲು ಸಲಹೆ ನೀಡಿದರು. ಹೀಗಾಗಿ ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್ ರಾಜ್ಯಗಳಲ್ಲಿನ ಬ್ರಾಹ್ಮಣ ಕುಟುಂಬಗಳ ಹುಡುಕಾಟ ನಡೆಯಿತು. ಅಲ್ಲಿನ ಯುವತಿಯರನ್ನು ಮದುವೆಯಾಗಿ ಯುವಕರು ಬದುಕು ಕಟ್ಟಿಕೊಂಡರು. ಭಾಷೆ, ಜೀವನಶೈಲಿ, ಆಹಾರ ಪದ್ಧತಿ ಎಲ್ಲವೂ ಭಿನ್ನವಾಗಿದ್ದರೂ ಧಾರ್ಮಿಕ ಆಚರಣೆ, ಸಂಪ್ರದಾಯ ಪಾಲನೆ ಆ ಕುಟುಂಬಗಳನ್ನು ಒಂದಾಗಿಸಿದೆ' ಎಂದು ಸಾಮಾಜಿಕ ಕಾರ್ಯಕರ್ತ ವೆಂಕಟರಮಣ ಬೆಳ್ಳಿ ಹೇಳುತ್ತಾರೆ.

ರೈತರ ಬಗ್ಗೆ ಅದರಲ್ಲೂ ಗ್ರಾಮೀಣ ಪ್ರದೇಶದ ಯುವಕರನ್ನು ಮದುವೆಯಾಗಲು ಯುವತಿಯರು ಯಾಕೆ ಸಿದ್ಧರಿಲ್ಲ ಎಂಬುದನ್ನು ಹುಡುಕಿ ಹೊರಟರೆ, ಹಲವು ಕಾರಣಗಳು ಅಚ್ಚರಿ ಮೂಡಿಸುತ್ತವೆ. ಯುವಕರಿಗಿಂತ ತಾವೇನೂ ಕಡಿಮೆ ಇಲ್ಲ ಎಂಬುದನ್ನು ಸಾಬೀತುಪಡಿಸಲು ಬಹುತೇಕ ಯುವತಿಯರು ಬಯಸಿದರೆ, ಮತ್ತೊಂದೆಡೆ ಹಳ್ಳಿಗಳಿಗಿಂತ ನಗರಪ್ರದೇಶದಲ್ಲಿನ ಬದುಕೇ ಚೆಂದ ಎಂಬ ಭಾವನೆ ಅವರಲ್ಲಿ ಬೇರೂರಿದೆ.

ಕೃಷಿಯಲ್ಲಿ ಆಗುವ ನಷ್ಟದ ದಿನಗಳನ್ನು ಎದುರಿಸುವುದು ಬೇಡ ಮತ್ತು ಜಾತಿ ವ್ಯವಸ್ಥೆಯ ಕಟ್ಟುಪಾಡುಗಳಲ್ಲಿ ಸಿಲುಕುವುದು ಬೇಡ ಎಂಬ ಹಂಬಲ ಅವರದ್ದು. ಎಲ್ಲವನ್ನೂ ಮೀರಬೇಕು ಎಂಬ ಅಭಿಲಾಷೆ ಅವರದ್ದು. ಉನ್ನತ ಶಿಕ್ಷಣ ಪಡೆದವರು, ವಿಭಿನ್ನ ಆಲೋಚನೆ ಉಳ್ಳವರು ರಾಜ್ಯ, ದೇಶ ಅಥವಾ ವಿದೇಶದಲ್ಲಿ ಉಳಿದು ಸಾಧನೆ ಮಾಡಲು ಬಯಸುತ್ತಾರೆ ಹೊರತು ಮದುವೆಯ ಬಂಧವನ್ನು ಕಟ್ಟಿಕೊಳ್ಳಲು ಆಸಕ್ತಿ ತೋರುವುದಿಲ್ಲ. ನಾಲ್ಕು ಗೋಡೆಗಳ ಮಧ್ಯೆಯೇ, ಎಲ್ಲರೆದುರು ಬದುಕು ಸವೆಸುವುದಕ್ಕಿಂತ ಜಗತ್ತನ್ನು ನೋಡುತ್ತ

